**ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಭವನದಲ್ಲಿ ದಿನಾಂಕ: 27-02-2026 ರಂದು ಸಂಜೆ 5.00 ಗಂಟೆಗೆ ನಡೆಸಿದ ಜಿಲ್ಲಾ ಮಟ್ಟದ Special Investigation Team (SIT) ತಂಡದ ಸಭೆಯ ನಡಾವಳಿಗಳು**

**ಉಪಸ್ಥಿತರು:**

1. ಶ್ರೀಮತಿ ಸ್ನೇಹಲ್ ಆರ್ ಭಾ.ಆ.ಸೇ, ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ.
2. ಶ್ರೀ ಭುವನೇಶ ಪಾಟೀಲ, ಭಾ.ಆ.ಸೇ, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ
3. ಶ್ರೀ, ಶೇಖ್ ಅಬ್ದುಲ್ ಅಲೀಂ ಸಿಧ್ದಿಕಿ ಕ.ಅ.ಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ
4. ಶ್ರೀಮತಿ ಗೀತಾ ಸಿ ಡಿ, ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ.
5. ಶ್ರೀ ಶಾಲಂ ಹುಸೇನ್, ಉಪ ವಿಭಾಗಾಧಿಕಾರಿಗಳು, ಧಾರವಾಡ.
6. ಶ್ರೀ ಮೋಹನ ಶಿವಣ್ಣವರ, ಉಪ ನಿರ್ದೇಶಕರು, ಭೂ ದಾಖಲೆ, ಧಾರವಾಡ
7. ತಹಶೀಲ್ದಾರರು, ಹುಬ್ಬಳ್ಳಿ, ಹುಬ್ಬಳ್ಳಿ ಶಹರ, ಧಾರವಾಡ, ಅಳ್ನಾವರ, ಕಲಘಟಗಿ, ಅಣ್ಣಿಗೇರಿ ಕುಂದಗೋಳ ಹಾಗೂ ನವಲಗುಂದ.
8. ವಲಯ ಅರಣ್ಯಾಧಿಕಾರಿಗಳು, ಧಾರವಾಡ, ಹುಬ್ಬಳ್ಳಿ, ಕಲಘಟಗಿ ಹಾಗೂ ಅಳ್ನಾವರ ವಲಯ,

*********

ಸಭೆಗೆ ಸೇರಿದ್ದ ಎಲ್ಲ ಅಧಿಕಾರಿಗಳಿಗೆ ಹಾಗೂ ಸಭಾಧ್ಯಕ್ಷರಿಗೆ ಸಮಿತಿ ಪರವಾಗಿ ಶ್ರೀ ಶೇಖ್ ಅಬ್ದುಲ್ ಅಲೀಂ ಸಿಧ್ದಿಕಿ, ಕ.ಅ.ಸೇ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಸ್ವಾಗತಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಬಗ್ಗೆ ವಿಷಯ ಪ್ರಸ್ತುತ ಪಡಿಸಲು ಆದೇಶಿಸಿದ ಮೇರೆಗೆ ಶ್ರೀ ಶೇಖ್ ಅಬ್ದುಲ್ ಅಲೀಂ ಸಿಧ್ದಿಕಿ, ಕ.ಅ.ಸೇ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಧಾರವಾಡ ರವರು ಈ ಕೆಳಕಂಡಂತೆ ಸಭೆಯನ್ನುದ್ದೇಶಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ತದನಂತರ, ಮಾನ್ಯ ಸಭಾಧ್ಯಕ್ಷರು ಸದರಿ ತಂಡ ಸಾಧಿಸಿದ ಪ್ರಗತಿಯನ್ನು ಕೋರಿದರು. ಇದಕ್ಕುತ್ತರವಾಗಿ, CRFL ವೆಬ್ ಪೋರ್ಟಲ್‌ನಲ್ಲಿ ಧಾರವಾಡ ಜಿಲ್ಲೆಗೆ ಸಂಬಂಧಿಸಿದಂತೆ, ಒಟ್ಟು 6714 ಸರ್ವೇ ನಂಬರುಗಳನ್ನು ಪರಿಶೀಲಿಸಬೇಕಿದ್ದು, ಇದರಲ್ಲಿ ಈಗಾಗಲೇ 1204 ಸರ್ವೇ ನಂಬರುಗಳನ್ನು ಪರಿಶೀಲಿಸಲಾಗಿರುತ್ತದೆ. ಸದರಿ 6714 ಸರ್ವೇ ನಂಬರುಗಳಲ್ಲಿ ಅಧಿಸೂಚಿತ ಅರಣ್ಯ ಪ್ರದೇಶಗಳು, (Notified Forests), ಸರ್ಕಾರಿ ದಾಖಲೆಗಳಲ್ಲಿ ಅರಣ್ಯವೆಂದು ನಮೂದಿಸಿದ ಪ್ರದೇಶಗಳು (Recorded Forests) ಹಾಗೂ ಸಂಭಾವ್ಯ (potential Forest like areas) ಅರಣ್ಯ ಪ್ರದೇಶಗಳು ಸೇರಿರುತ್ತವೆ.

ಸದರಿ ಸಮಿತಿಯ ಕಾರ್ಯದ ಪ್ರಥಮ ಭಾಗವಾಗಿ, ಯಾವುದೇ ಅರಣ್ಯ ಕಾಯ್ದೆಯ ಮುಖಾಂತರ ಅಧಿಸೂಚನೆಯಾಗಿರುವ ಅರಣ್ಯ ಪ್ರದೇಶಗಳ ಗ್ರಾಮವಾರು ಸರ್ವೇ ನಂಬರ್‌ಗಳನ್ನು ಪರಿಶೀಲಿಸುವುದು. ಸದರಿ 1139 ಸರ್ವೇ ನಂರುಗಳಲ್ಲಿ ಈಗಾಗಲೇ 930 ಸರ್ವೇ ನಂಬರುಗಳನ್ನು ಪರಿಶೀಲಿಸಲಾಗಿದೆ ಉಳಿದ 209 ಸರ್ವೇ ನಂಬರುಗಳನ್ನು ಶೀಘ್ರವೇ ಪರಿಶೀಲಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಈ ಪ್ರಕರಣಗಳಲ್ಲಿ ಪಹಣಿ ಪತ್ರಿಕೆಗಳಲ್ಲಿ ಕಾಲಂ ನಂ 9 ರಲ್ಲಿ ವಿಸ್ತೀರ್ಣ 0-0 ಇದ್ದು, ಇನ್ನೂ ಕೆಲವು ಪ್ರಕರಣಗಳಲ್ಲಿ ಇಂಡೀಕರಣ ಸಮಸ್ಯೆ ಇರುತ್ತದೆ. ಆದ ಕಾರಣ, ಈ 209 ಸರ್ವೇ ನಂಬರುಗಳ ಪರಿಶೀಲನೆ ಕಾರ್ಯ ಕುಂಠಿತವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಇದಕ್ಕೆ ಸಭಾಧ್ಯಕ್ಷರು ಇಂತಹ ಪ್ರಕರಣಗಳ ಪಟ್ಟಿಯನ್ನು ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸಲು ಸೂಚಿಸಿದರು ಹಾಗೂ ಉಪವಿಭಾಗಾಧಿಕಾರಿಗಳಿಗೆ ಪ್ರಕರಣಗಳನ್ನು ಪರಿಶೀಲಿಸಿ ಪಹಣಿ ಪತ್ರಿಕೆ ಕಾಲಂ ನಂ 9 ರಲ್ಲಿ ವಿಸ್ತೀರ್ಣ ಅಳವಡಿಸಲು ಕ್ರಮಕೈಗೊಳ್ಳಲು ಸೂಚಿಸಿರು.

**ಕ್ರಮ: ಕಂದಾಯ ಅಧಿಕಾರಿಗಳಿಗೆ** (ಉಪವಿಭಾಗಾಧಿಕಾರಿಗಳಿಗೆ ಹಾಗೂ ಎಲ್ಲ ತಹಶೀಲ್ದಾರರಿಗೆ ಹಾಗೂ ಅರಣ್ಯ ಇಲಾಖೆಗೆ ಪಟ್ಟಿ ಸಲ್ಲಿಸಲು)

ಮುಂದುವರೆದು, ಕಂದಾಯ ಇಲಾಖೆಯ ಸ್ವಾಧೀನದಲ್ಲಿರುವ ಅರಣ್ಯ ಜಮೀನುಗಳನ್ನು ಅರಣ್ಯ ಉದ್ದೇಶಕ್ಕಾಗಿ ಹೊರತುಪಡಿಸಿ ಬೇರೆ ಉದ್ದೇಶಕ್ಕೆ ಹಂಚಿಕೆ ಮಾಡಿರುವ ಪ್ರಕರಣಗಳಲ್ಲಿ ಪ್ರಗತಿಯು ತುಂಬಾ ಕಡಿಮೆ ಇದ್ದು, ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಂಚಿಕೆ ಮಾಡಿದ ಆದೇಶ ಸಂಖ್ಯೆ, ವರ್ಷ, ಪ್ರಾಧಿಕಾರಿ ಇತ್ಯಾದಿ ದಾಖಲೆಗಳನ್ನು CRFL ವೆಬ್ ಪೋರ್ಟಲ್‌ನಲ್ಲಿ ದಾಖಲಿಸಬೇಕಿರುವುದರಿಂದ, ಈ ಕಾರ್ಯ ಪೂರ್ಣಗೊಳಿಸಲು ಪ್ರತಿಯೊಂದು ಸರ್ವೇ ನಂಬರುಗಳಲ್ಲಿರುವ ಹಂಚಿಕೆ ಕುರಿತ ದಾಖಲೆ ಮತ್ತು ಮಾಹಿತಿ ಅವಶ್ಯಕವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಇದಕ್ಕೆ ಸಭಾಧ್ಯಕ್ಷರು, ಉಪವಿಭಾಗಾಧಿಕಾರಿಗಳಿಗೆ ಹಾಗೂ ಎಲ್ಲ ತಹಶೀಲ್ದಾರರಿಗೆ 4922 ಜನರ/ ಸರ್ವೇ ನಂಬರುಗಳಿಗೆ ಸಂಭಂಧಿಸಿದ ಹಂಚಿಕೆ ಮಾಡಿದ ಆದೇಶ ಸಂಖ್ಯೆ, ವರ್ಷ, ಪ್ರಾಧಿಕಾರ ಇತ್ಯಾದಿ ದಾಖಲೆಗಳನ್ನು ಒಂದು ವಾರದೊಳಗೆ ಸೃಜಿಸಿ, ಸಮಿತಿಗೆ ಸಲ್ಲಿಸಲು ಸೂಚಿಸಿದರು.

**ಕ್ರಮ: ಕಂದಾಯ ಅಧಿಕಾರಿಗಳಿಗೆ** (ಉಪವಿಭಾಗಾಧಿಕಾರಿಗಳಿಗೆ ಹಾಗೂ ಎಲ್ಲ ತಹಶೀಲ್ದಾರರಿಗೆ)

ಮುಂದುವರೆದು, ಸದರಿ ವಿಷಯವಾಗಿ ತಹಶೀಲ್ದಾರರು, ಹುಬ್ಬಳ್ಳಿ ಶಹರ ರವರು ಮಾತನಾಡಿ, ಕೆಲವೊಂದಿಷ್ಟು ಸರ್ವೇ ನಂಬರುಗಳು ಮಹಾನಗರ ಪಾಲಿಕೆ ರವರ ವ್ಯಾಪ್ತಿಯಲ್ಲಿ ಬರುತ್ತಿದ್ದು, ಮಹಾನಗರ ಪಾಲಿಕೆಯ ಅಧಿಕಾರಿ ಮತ್ತು ಸಿಬ್ಬಂಧಿಗಳನ್ನು ಸಭೆಗೆ ಕರೆಯಲು ಹಾಗೂ ಸಂಬಂಧಿಸಿದ ಸರ್ವೇ ನಂಬರುಗಳ ಮಾಹಿತಿ ಮತ್ತು ದಾಖಲೆಗಳನ್ನು ಅವರಿಂದ ಪಡೆಯಲು ಮಾನ್ಯ ಸಭಾಧ್ಯಕ್ಷರಿಗೆ ಮನವಿ ಮಾಡಿದರು. ಇದಕ್ಕುತ್ತರವಾಗಿ ಮಾನ್ಯ ಸಭಾಧ್ಯಕ್ಷರು, ಅಪರ ಜಿಲ್ಲಾಧಿಕಾರಿಗಳಿಗೆ ಸಂಬಂಧಿಸಿದ ಮಹಾನಗರ ಪಾಲಿಕೆಯ ಅಧಿಕಾರಿ ಮತ್ತು ಸಿಬ್ಬಂಧಿಗಳನ್ನು ಮುಂದಿನ ಸಭೆಗೆ ಕರೆಯಲು ಹಾಗೂ ಸಂಬಂಧಿಸಿದ ಸರ್ವೇ ನಂಬರುಗಳ ಮಾಹಿತಿ ಮತ್ತು ದಾಖಲೆಗಳನ್ನು ಪಡೆಯಲು ಅಗತ್ಯ ಕ್ರಮಕೈಗೊಳ್ಳಲು ನಿರ್ದೇಶನ ನೀಡಿದರು.

**ಕ್ರಮ: ಮಾನ್ಯ ಅಪರ ಜಿಲ್ಲಾಧಿಕಾರಿಗಳು.**

ಮುಂದುವರೆದು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸದರಿ ಸಮಿತಿಯ ಮುಂದಿನ ಭಾಗವಾದ ಸರ್ಕಾರಿ ದಾಖಲೆಗಳಲ್ಲಿ ಅರಣ್ಯವೆಂದು ನಮೂದಿಸಿದ ಪ್ರದೇಶಗಳು (Recorded Forests) ಗಳ ಬಗ್ಗೆ ವಿವರಿಸುತ್ತಾ, CRFL ವೆಬ್ ಪೋರ್ಟಲ್‌ನಲ್ಲಿ ಕಂದಾಯ ದಾಖಲೆಗಳಲ್ಲಿ ಒಟ್ಟು 113 ಸರ್ವೇ ನಂಬರುಗಳು ಹಾಗೂ ತದನಂತರ, ಅರಣ್ಯ ದಾಖಲೆಗಳಲ್ಲಿ ಸಹ 32 ಸರ್ವೇ ನಂಬರುಗಳಿದ್ದು, ಸದರಿ ಪ್ರದೇಶಗಳು ಅರಣ್ಯ ಇಲಾಖೆ ಸುಪರ್ದಿಯಲ್ಲಿದೆಯೋ ಅಥವಾ ಕಂದಾಯ ದಾಖಲೆಯಲ್ಲಿದೆಯೋ ಎಂಬುದನ್ನು ಪರಿಶೀಲಿಸಿ, ಸಮಿತಿಗೆ ಸಲ್ಲಿಸಲು ಕೋರಿದರು.

**ಕ್ರಮ: ಕಂದಾಯ ಅಧಿಕಾರಿಗಳಿಗೆ** (ಉಪವಿಭಾಗಾಧಿಕಾರಿಗಳಿಗೆ ಹಾಗೂ ಎಲ್ಲ ತಹಶೀಲ್ದಾರರಿಗೆ)

ಮುಂದುವರೆದು, ಮಾನ್ಯ ಸಭಾಧ್ಯಕ್ಷರು, ಮುಂದಿನ ವಾರದಲ್ಲಿ ಸಮಿತಿಯು ಇನ್ನೊಂದು ಸಭೆಯನ್ನು ಕರೆಯಲಾಗುವುದು, ಕಾರಣ, ಎಲ್ಲ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮಕೈಗೊಂಡು ಸಭೆಗೆ ಹಾಜರಾಗಲು ಸೂಚಿಸಿದರು .

ಸದರಿ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು
ಹಾಗೂ ಜಿಲ್ಲಾ ದಂಡಾಧಿಕಾರಿಗಳು,
ಧಾರವಾಡ ಜಿಲ್ಲೆ
ಹಾಗೂ ಅಧ್ಯಕ್ಷರು
ಜಿಲ್ಲಾ ಮಟ್ಟದ ತಜ್ಞ ಸಮಿತಿ ಹಾಗೂ ಜಿಲ್ಲಾ ಮಟ್ಟದ SIT

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಧಾರವಾಡ
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
ಧಾರವಾಡ ವಿಭಾಗ, ಧಾರವಾಡ
ಹಾಗೂ ಸಂಚಾಲಕರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ

ಉಪ ನಿರ್ದೇಶಕರು,
ಭೂದಾಖಲೆ,
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.

ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,,
ಹಾಗೂ ಸದಸ್ಯರು,
ಜಿಲ್ಲಾ ಮಟ್ಟದ ತಜ್ಞ ಸಮಿತಿ.